Sri C.M.UDASI (Minister for Public Works Department):

a) Total 13.

b) In Dakshina Kannada District, toll is being collecting near Nethravathi bridge at Km 327.00 on Bangalore-Mangalore Section of National Highway No-48.

c) On National Highways if New major bridges and 4/6 lane of National Highway are constructed toll will be collected as per the guide lines of the Ministry.

646 ಶ್ರೀ ಖಾದರ್ ಯು.ಟಿ. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮಾನಿ–ಉಳ್ಳಾಲ ರಸ್ತೆಯು ದುಸ್ಥಿತಿಯಲ್ಲಿದ್ದು, ಈ ರಸ್ತೆಯಲ್ಲಿ ಓಡಾಡುವ ಮ್ಯಾಂಗನೀಸ್ ಅದಿರು ಲಾರಿಗಳು ಮತ್ತು ಬುಲೇಟ್ ಟ್ಯಾಂಕರ್‌ಗಳಿಂದ ಸೇತುವೆ ಮತ್ತು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮಾನಿ–ಉಳ್ಳಾಲ ರಸ್ತೆಯಲ್ಲಿ ಅದಿರು ಲಾರಿ, ಬುಲೇಟ್ ಟ್ಯಾಂಕರ್ ಮತ್ತಿತರ ಬೃಹತ್ ವಾಹನಗಳ ಸಂಚಾರವನ್ನು ನಿಷೇಧಿಸಲಾಗುವುದೇ;

ಇ) ಈ ರಸ್ತೆಯನ್ನು ಈ ಸಾಲಿನಲ್ಲಿಯೇ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಮಾಣಿ–ಉಳ್ಳಾಲ ರಸ್ತೆಯಲ್ಲಿ ಭಾರಿ ಅದಿರು ತುಂಬಿದ ಲಾರಿ ಹಾಗೂ ಬುಲೇಟ್ ಟ್ಯಾಂಕರ್‌ಗಳು ಮತ್ತು ಇತರ ಬೃಹತ್ ವಾಹನಗಳ ಸಂಚಾರ ನಿಷೇದ ಬಗ್ಗೆ ಜಿಲ್ಲಾಧಿಕಾರಿಯವರೆಗೆ ದಿನಾಂಕ: 26–6–2009ರಂದು ಪತ್ರ ಬರೆದು ಅಧಿಸೂಚನೆ ಹೊರಡಿಸಲು ಕೋರಲಾಗಿದೆ.

ಇ) ಈ ರಸ್ತೆಯಲ್ಲಿ ವಾಹನ ದಟ್ಟಣೆಯನ್ನು ಪರಿಗಣಿಸಿ ಅಭಿವೃದ್ಧಿಪಡಿಸಲು ರೂ. 20.25 ಕೋಟಿ ಅಂದಾಜಿಸಲಾಗಿದೆ. ಆದರೆ ಸದರಿ ರಸ್ತೆ ಅಭಿವೃದ್ಧಿಗೆ 2009–10ನೇ ಸಾಲಿನಲ್ಲಿ ರೂ.104.16 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುಮೋದನೆಯಾಗಿದ್ದು, ಒಟ್ಟು 6 ಕಿಮೀ. ಉದ್ದದ ರಸ್ತೆಯನ್ನು ಸುವರ್ಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಅಭಿವೃದ್ಧಿಪಡಿಸಲಾಗುವುದು.